ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿಃ ಬೇಲೂರು

ಃದಿನಾಂಕಃ15 ನೇ ಸೆಪ್ಟೆಂಬರ್ 2012 ನೇ ಇಸವಿಃ

ಃಉಪಸ್ಥಿತರುಃ

ಶ್ರೀ ಪ್ರಕಾಶ್.ವಿ. ಬಿ.ಎ.ಎಲ್. ಎಲ್.ಎಲ್.ಬಿ;
ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿಃಬೇಲೂರು

ಃಜಾರಿ ಪ್ರಕರಣ ಸಂಖ್ಯೆಃ9ಃ2008ಃ

ತೀರ್ಪುಧಣಿಗಳು ಃ ಹೆಚ್.ಕೆ.ನಂಜೇಗೌಡ ಬಿನ್ ಕಾಳೇ ಗೌಡ,65 ವರ್ಷ, ಹುಲಿಕೆರೆ ಗ್ರಾಮ, ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು , ಹಾಸನ ಜಿಲ್ಲೆ

(ಶ್ರೀ ಎಂ.ಜಿ. ವಕೀಲರು)

ವಿರುದ್ಧ

ತೀರ್ಪುಋಣಿಗಳು ಃ 2) ಬಸವೇಗೌಡ (ಪೌತಿ) ಇವರ ವಾರಸೂರರು

ಎ) ಹೆಚ್.ಬಿ. ಈರಲಿಂಗೇಗೌಡ ಬಿನ್ ಬಸವೇಗೌಡ , ಹುಲಿಕೆರೆ ಗ್ರಾಮ, ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು

ಬಿ) ಮಲ್ಲಿಗಮ್ಮ ಕೋಂ ನಂಜೇಗೌಡ ರಿಃ ಫಾರೆಸ್ಟ್ ಆಫೀಸರ್, ಸಂಗಮೇಶ್ವರ ಬಡಾವಣೆ, ಹಾಸನ

ಸಿ) ಭಾಗೀರಥಮ್ಮ ಕೋಂ ಶೇಖರಪ್ಪ, ಯಕಶೆಟ್ಟಿಹಳ್ಳಿ ಹಳೇಬೀಡು ಹೋಬಳಿ ಬೇಲೂರು ತಾಲ್ಲೂಕು

ಡಿ) ಚಂದ್ರಮ್ಮ ಕೋಂ ರಾಜು, ಸಿದ್ದಾಪುರ
ಗೋಣಿಸೋಮನಹಳ್ಳಿ ಅಂಚೆ ,
ಹಳೇಬೀಡು ಹೋಬಳಿ, ಬೇಲೂರು ತಾ

3. ಆರ್.ಎಸ್.ಎ 3 ನೇ ಹಂಪೇಗೌಡ ಬಿನ್ ಬೋಮ್ಮೇಗೌಡ(ಪೌತಿ) ಇವರ ವಾರಸುದಾರರು

ಎ) ಜಯಮ್ಮ ಕೊಂ ಶಿವಮಲ್ಲೇಗೌಡ,
ಹುಲಿಕೆರೆ ಗ್ರಾಮ ಹಳೇಬೀಡು
ಹೋಬಳಿ, ಬೇಲೂರು ತಾಲ್ಲೂಕು
ಗೋಣಿಸೋಮನಹಳ್ಳಿ ಅಂಚೆ

ಬಿ) ಗುರುಪಾದಮ್ಮ ಕೋಂ ಧರ್ಮೇಗೌಡ,ಗಾಳಿಹಳ್ಳಿ ,ಲಕ್ಯಾ ಹೋಬಳಿ
ಕಳಸಾಪುರ ಅಂಚೆ ಚಿಕ್ಕಮಗಳೂರು
ತಾಲ್ಲೂಕು ಮತ್ತು ಜಿಲ್ಲೆ

4. ಹಾಲೇಗೌಡ ಬಿನ್ ಮಲ್ಲೇಗೌಡ
ಹುಲಿಕೆರೆ ಗ್ರಾಮ, ಹಳೇಬೀಡು
ಹೋಬಳಿ,ಬೇಲೂರು ತಾ, ಹಾಸನ
ಜಿಲ್ಲೆ

(ತೀರ್ಪುಋಣಿಗಳು 2(ಎ) 3(ಎ) (ಬಿ) 2(ಸಿ) 2(ಡಿ) ಗೈರುಹಾಜರು)
(ತೀರ್ಪುಋಣಿ 4 ಶ್ರೀ ಬಿ.ಎಂ.ವಕೀಲರು)

*******

: ಮಧ್ಯಂತರ ಅರ್ಜಿ 2 ಕ್ಕೆ ಪಕ್ಷಕಾರರುಃ

ಅರ್ಜಿದಾರರು : ಬಸವೇಗೌಡ ಮತ್ತು ಇತರರು

ವಿರುದ್ಧ

ಎದುರುದಾರರು : ನಂಜೇಗೌಡ

*******

## : ಮಧ್ಯಂತರ ಅರ್ಜಿ 2 ರ ಮೇಲೆ ಆದೇಶ :

ತೀರ್ಪುಋಣಿಗಳು ವ್ಯವಹಾರ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಮಧ್ಯಂತರ ಅರ್ಜಿ 2 ನ್ನು ಸಲ್ಲಿಸಿ , ಸದರಿ ಪ್ರಕರಣದಲ್ಲಿ ವಾರೆಂಟ್‌ನ್ನು ಒಪ್ಪಿಸಲು ಮಾಡಿರುವ ಆದೇಶವನ್ನು ವಾಪಸ್ಸು ಕರೆಸಬೇಕೆಂದು ತಮ್ಮ ಪ್ರಮಾಣ ಪತ್ರದಲ್ಲಿ ಕಾರಣಗಳನ್ನು ನೀಡಿ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

2. ತೀರ್ಪುಋಣಿಗಳು ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸುತ್ತಾ ತೀರ್ಪುಧಣಿಗಳು ಸದರಿ ಜಾರಿ ಪ್ರಕರಣವನ್ನು ತೀರ್ಪುಋಣಿಗಳ ವಿರುದ್ಧ ಸ್ವಾಧೀನ ವಹಿಸಿಕೊಂಡುವಂತೆ ಕೋರಿ ಜಾರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ನ್ಯಾಯಾಲಯವು ತೀರ್ಪುಋಣಿಗಳ ವಿರುದ್ಧ ಈ ಪ್ರಕರಣದಲ್ಲಿ ಒಪ್ಪಿಸುವ ವಾರೆಂಟ್‌ನ್ನು ಜಾರಿ ಮಾಡಲು ಆದೇಶಿಸಿರುತ್ತದೆ. ತೀರ್ಪುಧಣಿಗಳು ಸ್ವಾಧೀನ ಪಡೆಯಲು ಅರ್ಹರಿರುವುದಿಲ್ಲ. ಏಕೆಂದರೆ ತೀರ್ಪುಧಣಿಗಳು ಈಗಾಗಲೇ ಜಾರಿ ಪ್ರಕರಣ ಸಂಖ್ಯೆ:65:98 ನ್ನು ಹೂಡಿದ್ದು ನ್ಯಾಯಾಲಯದ ಆಯುಕ್ತರ ಮುಖೇನ ಮತ್ತು ತಾಲ್ಲೂಕು ಸರ್ವೆಯರ್‌ರವರುಗಳ ಮುಖೇನ ಒಪ್ಪಿಸುವ ವಾರೆಂಟ್‌ನ್ನು ಜಾರಿ ಮಾಡಲು ಆದೇಶಿಸಿದ್ದು ಅದರಂತೆ ಜಾರಿ ಮಾಡಲು ಹೋದಾಗ ಜಾರಿ ಪ್ರಕರಣದ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರ್ 58:3 ಮತ್ತು 58:4 ಕ್ಕೆ ಸಂಬಂಧಪಡುವುದಿಲ್ಲ ಎಂಬ ಕಾರಣದ ಮೇರೆಗೆ ಹಿಂತಿರುಗಿಸಿದ್ದು ನಂತರ ತೀರ್ಪುಧಣಿಗಳು ಸದರಿ ಜಾರಿ ಪ್ರಕರಣವನ್ನು ಮೆಮೋ ಸಲ್ಲಿಸಿ ಸದರಿ ಪ್ರಕರಣವು ವಜಾಗೊಂಡಿರುತ್ತದೆ. ಪುನಃ ತೀರ್ಪುಧಣಿಗಳು ಸದರೀ ಜಾರಿ ಪ್ರಕರಣವನ್ನು ಅದೆಪೀ ಸ್ಟತ್ತಿನ ಮೇಲೆ ಸಲ್ಲಿಸಿರುತ್ತಾರೆ. ಜಾರಿ ಪ್ರಕರಣಕ್ಕೆ ತಾನು ತಕರಾರನ್ನು ಸಲ್ಲಿಸಿರುತ್ತೇನೆ. ತೀರ್ಪುಧಣಿಗಳು ಹಿಂದಿನ ಜಾರಿ ಪ್ರಕರಣದ ನಡವಳಿಕೆಯ ಅಂಶಗಳನ್ನು ಮರೆಮಾಚಿರುತ್ತಾರೆ ಮತ್ತು ಸದರಿ ಜಾರಿ ಪ್ರಕರಣವನ್ನು ನನ್ನ ಆರೋಗ್ಯ ಸರಿ ಇಲ್ಲದಿದ್ದರೂ ಕೂಡ ನಾನೇ ನೋಡಿಕೊಳ್ಳುತ್ತಿದ್ದು ಸಕಾಲದಲ್ಲಿ ತಕರಾರನ್ನು ಸಲ್ಲಿಸಲು ಆಗಿರುವುದಿಲ್ಲ. ನ್ಯಾಯಾಲಯದ ಆಡಳಿತಾಧಿಕಾರಿಯವರು ಒಪ್ಪಿಸುವ

ವಾರೆಂಟ್‌ನ್ನು ನಮಗೆ ಯಾವುದೇ ರೀತಿಯ ಒಪ್ಪಿಸುವ ತಿಳುವಳಿಕೆಯನ್ನು ನೀಡದೇ ಜಾರಿ ಮಾಡಿಸಿರುತ್ತಾರೆ. ಜಯಮ್ಮ ಬಿನ್ ಹಂಪೇಗೌಡ ಇವರು ಅ.ದಾ.ಸಂಖ್ಯೆ:84:2004 ರಲ್ಲಿ ಸರ್ವೆ ನಂ.58:4 ಕ್ಕೆ ಸಂಬಂಧಪಟ್ಟಂತೆ ಹಕ್ಕಿನ ಘೋಷಣೆ ಕುರಿತು ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಜಾರಿ ಪ್ರಕರಣದಲ್ಲಿ ನಾಯಾಲಯವು ದಿನಾಂಕ:20-2-2010 ರಂದು ಒಪ್ಪಿಸುವ ವಾರೆಂಟ್‌ನ್ನು ನೀಡಿದ್ದು ಅದನ್ನು ಪುನಃ ಹಿಂದಕ್ಕೆ ಕರೆಸಬೇಕಾಗಿರುತ್ತದೆ. ಒಂದು ವೇಳೆ ಸದರಿ ಆದೇಶವನ್ನು ಪುನಃ ಕರೆಸದಿದ್ದಲ್ಲಿ ತೀರ್ಪುಋಣಿಗಳಿಗೆ ಅಪಾರವಾದ ಕಷ್ಟ ನಷ್ಟಗಳುಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದುದರಿಂದ , ಆದೇಶಿಸಿರುವ ಒಪ್ಪಿಸುವ ವಾರೆಂಟ್ ಆದೇಶವನ್ನು ಪುನಃ ಹಿಂದಕ್ಕೆ ಕರೆಸಬೇಕಾಗಿ ಕೋರಿರುತ್ತಾರೆ.

3. ನಾಲ್ಕನೇ ತೀರ್ಪುಋಣಿಗಳು ಸಲ್ಲಿಸಿರುವ ಅರ್ಜಿಗೆ ತೀರ್ಪುಧಣಿಗಳು ತಮ್ಮ ತಕರಾರನ್ನು ಸಲ್ಲಿಸಿದ್ದು , ತಮ್ಮ ತಕರಾರಿನಲ್ಲಿ- ತೀರ್ಪುಋಣಿ ಸಲ್ಲಿಸಿರುವ ಅರ್ಜಿಯು ಕಾನೂನು ರೀತ್ಯಾವಾಗಲೀ , ವಸ್ತುಸ್ಥಿತಿಯಿಂದಾಗಲೀ ಕೂಡಿರುವುದಿಲ್ಲ. ತೀರ್ಪುಋಣಿಗಳು ತಮ್ಮ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ಪ್ರಮಾಣ ಪತ್ರಿಕೆಯಲ್ಲಿ ಜಾರಿ ನಂ.65:98 ನ್ನು ಸಲ್ಲಿಸಿದ್ದು ನಿಜವಿರುತ್ತದೆ. ಆದರೆ ಒಪ್ಪಿಸುವ ವಾರೆಂಟ್‌ನ್ನು ನ್ಯಾಯಾಲಯದಿಂದ ಆದೇಶ ಮಾಡಿದ ಮೇಲೆ ವಾರೆಂಟ್ ಜಾರಿಯಾಗಲಿಲ್ಲವೆಂದು ತಾಲ್ಲೂಕು ಸರ್ವೇಯರ್ ತಿಳಿಸಿದ ಮೇಲೆ ಜರೀ ಪ್ರಕರಣ ಸಂಖ್ಯೆ:65:98 ನ್ನು ವಾಪಸ್ಸು ಪಡೆದು ಈ ಜಾರಿ ಪ್ರಕರಣವನ್ನು ಸಲ್ಲಿಸಿದ್ದೇವೆಂದು ತಿಳಿಸಿರುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ಕಾರಣ ಜಾರಿ ಪ್ರಕರಣ ಸಂಖ್ಯೆ:65:98 ರಲ್ಲಿ ಎಲ್ ಆರ್ಸ್ ಅರ್ಜಿಯನ್ನು ಹಾಕಿಕೊಂಡು ತುಂಬಾ ತಿದ್ದುಪಡಿಗಳನ್ನು ಮಾಡಬೇಕಾಗಿತ್ತು ತಿದ್ದುಪಡಿ ಅರ್ಜಿಯೇ ಜಾಸ್ತಿಯಾಗುವ ಸಂದರ್ಭವಿದ್ದುದರಿಂದ ಹೊಸದಾಗಿ ಈ ಜಾರಿ ಪ್ರಕರಣ ಸಂಖ್ಯೆ:9:08 ನ್ನು ಸಲ್ಲಿಸಿರುತ್ತದೆ. ತೀರ್ಪುಋಣಿ ಹೇಳಿರುವಂತೆ ತಾಲ್ಲೂಕು ಸರ್ವೇಯರ್‌ರರು ಕೊಟ್ಟಿರುವ ಅಳತೆಯ ಮೇರೆಗೆ ಸ್ವತ್ತು ಇಲ್ಲವೆಂದು ತಿಳಿಸಿದ್ದರ ಮೇರೆಗೆ ವಾಪಸ್ಸು ಪಡೆದಿರುತ್ತೇವೆಂದು ಹೇಳಿರುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ. ಡಿಕ್ರಿಯಲ್ಲಿರುವಂತೆ ಈಗಲೂ ಅನುಸೂಚಿ ಸ್ವತ್ತು ಇರುತ್ತದೆ. ಅದನ್ನು ಪಡೆಯುವ ಹಕ್ಕು ತೀರ್ಪುಧಣಿಗಳು ಹೊಂದಿರುತ್ತಾರೆ.

ಇದುವರೆಗೂ ಲಿಖಿತ ತಕರಾರು ಸಲ್ಲಿಸದೇ ಈ ಒಪ್ಪಿಸುವ ವಾರೆಂಟ್‌ನ್ನು ವಾಪಸ್ ಕೆರೆಸಿ ಎಂದು ಕೇಳಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ತೀರ್ಪುಋಣಿಗಳು ತಮ್ಮ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಶುದ್ಧ ಸುಳ್ಳಿನಿಂದ ಕೂಡಿದ್ದು ಸ್ವತ್ತನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂಬ ದುರಾಲೋಚನೆಯಿಂದ ಈ ಅರ್ಜಿ ತಂದಿರುತ್ತಾರೆ. ಈ ಅರ್ಜಿಯನ್ನು ಪುರಸ್ಕರಿಸಿದರೆ ತೀರ್ಪುಧಣಿಯವರಿಗೆ ತುಂಬಾ ತೊಂದರೆಯಾಗುತ್ತದೆ. ಪುರಸ್ಕರಿಸದಿದ್ದರೆ ತೀರ್ಪುಋಣಿಯವರಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲ. ಆದುದರಿಂದ ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ ನ್ಯಾಯಾಲಯದವರು ಕೃಪೆ ಮಾಡಿ ತೀರ್ಪುಋಣಿಗಳು ಸಲ್ಲಿಸಿರುವ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಬೇಕಾಗಿ ಕೋರಿರುತ್ತಾರೆ.

4. ವಾದವನ್ನು ಆಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸುತ್ತದೆ:-

1) ಅರ್ಜಿದಾರರು:ತೀರ್ಪುಋಣಿಗಳು ತಮ್ಮ ಅರ್ಜಿಯನ್ನು ಪುರಸ್ಕರಿಸಿ ಒಪ್ಪಿಸುವ ವಾರೆಂಟ್‌ನ್ನು ವಾಪಸ್ ಪಡೆಯಲು ಸಕಾರಣಗಳನ್ನು ನೀಡಿರುತ್ತಾರೆಯೇ ?

2) ಯಾವ ಆದೇಶ ?

6. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ:-

ಅಂಶ ಸಂಖ್ಯೆ:1: ಸಕಾರಾತ್ಮಕವಾಗಿ

ಅಂಶ ಸಂಖ್ಯೆ:2: ಅಂತಿಮ ಆದೇಶದಂತೆ

ಈ ಕೆಳಕಂಡ:

## **: ಕಾರಣಗಳಿಗಾಗಿ :**

***ಅಂಶ ಸಂಖ್ಯೆ:1:-***

7. ತೀರ್ಪುಧಣಿಯು ಪ್ರಸ್ತುತ ಜಾರಿ ಅರ್ಜಿಯನ್ನು ಮೂಲ ದಾವಾ ಸಂಖ್ಯೆ:377:1974 , ಆರ್.ಎ.ಸಂಖ್ಯೆ:101:84 ಮತ್ತು ಆರ್.ಎಸ್.ಎ.ಸಂಖ್ಯೆ:669:91 ರ ತೀರ್ಪು ಮತ್ತು ಡಿಕ್ರಿ ಆದೇಶದಂತೆ ಪರಸ್ತುತ ಜಾರಿ ಅರ್ಜಿಯನ್ನು ಸಲ್ಲಿಸಿ, ದಾವಾ ಸ್ವತ್ತನ್ನು ತೀರ್ಪುಋಣಿಗಳಿಂದ ಸ್ವಾಧೀನವನ್ನು ತೀರ್ಪುಧಣಿಯ ಸ್ವಾಧೀನಕ್ಕೆ ವಹಿಸಿಕೊಡಬೇಕೆಂದು ಮತ್ತು ರೂ.24,000-00 ಗಳ ಪರಿಹಾರವನ್ನು ಕೊಡಿಸಬೇಕೆಂದು ಸಲ್ಲಿಸಿರುತ್ತಾರೆ. ಅರ್ಜಿಯಲ್ಲಿ ನೋಟೀಸು ತೀರ್ಪುಋಣಿಗಳಿಗೆ ಜಾರಿಯಾದ ನಂತರ ಗೈರು ಹಾಜರಾಗಿರುತ್ತಾರೆ. ತೀರ್ಪುಧಣಿಯ ಈ ಜಾರಿ ಅರ್ಜಿಗೆ ತೀರ್ಪುಋಣಿಗಳು ಯಾವುದೇ ತಕರಾರನ್ನು ಸಲ್ಲಿಸದೇ ಇರುವುದರಿಂದ ತೀರ್ಪುಧಣಿ ಕೋರಿದಂತೆ ಸ್ವಾಧೀನವಹಿಸುವ ವಾರೆಂಟ್‌ನ್ನು ನೀಡಿದ ನಂತರ ತೀರ್ಪುಋಣಿಗಳು ವಕೀಲರ ಮೂಲಕ ಹಾಜಾಗಿ ಮಧ್ಯಂತರ ಅರ್ಜಿ ಸಂಖ್ಯೆ:2 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ , ವಾಪಸ್ ಪಡೆಯಬೇಕೆಂದು ಕೋರಿರುತ್ತಾರೆ.

8. ತೀರ್ಪುಧಣಿ ಈ ಮೊದಲು ಜಾರಿ ಅರ್ಜಿ ಸಂಖ್ಯೆ:65:2008 ನ್ನು ಸಲ್ಲಿಸಿ ಡೆಲಿವರಿ ವಾರೆಂಟ್‌ನ್ನು ಪಡೆದುಕೊಂಡಿದ್ದು ಅದರಲ್ಲಿ ತಾಲ್ಲೂಕು ಸರ್ವೇಯರ್‌ರವರು ಅಳತೆ ಮಾಡಿ ತೀರ್ಪು ಮತ್ತು ಡಿಕ್ರಿಯಲ್ಲಿನ ಆಸ್ತಿ ಸರ್ವೆ ನಂ.58:3 ಮತ್ತು ಸರ್ವೆ ನಂ.58:4 ಕ್ಕೆ ಸಂಬಂಧಿಸಿದಂತೆ ತೀರ್ಪುಧಣಿ ಸ್ಥಳವನ್ನು ತೋರಿಸಿರುವುದಿಲ್ಲ ಎಂದು ವಾಪಸ್ಸು ಮಾಡಿರುವುದರಿಂದ ವಾದಿಯೇ ಜಾರಿ ಅರ್ಜಿಯನ್ನು ವಜಾ ಮಾಡಿಸಿಕೊಂಡಿರುತ್ತಾರೆ, ಪುನಃ ಈ ಜಾರಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಜಾರಿ ಅರ್ಜಿಯು ಊರ್ಜಿತವಾಗುವುದಿಲ್ಲ ಎಂದು ಪ್ರಮಾಣ ಪತ್ರದಲ್ಲಿ ಕಾರಣಗಳನ್ನು ನೀಡಿರುತ್ತಾರೆ ಹಾಗೂ ಜಯಮ್ಮ ಕೋಂ ಹಂಪೇಗೌಡ ಎಂಬುವರು ಇದೇ ನ್ಯಾಯಾಲಯದಲ್ಲಿ ಹಕ್ಕು ಘೋಷಣೆ ಕೋರಿ ಮೂಲ ದಾವಾ ಸಂಖ್ಯೆ:84:2003 ನ್ನು ದಾವಾ ಸರ್ವೆ ನಂ.58:2004 ಕ್ಕೆ ಸಲ್ಲಿಸಿರುತ್ತಾರೆ. ಆದ್ದರಿಂದಲೂ ಸಹಾ ಒಪ್ಪಿಸುವ ವಾರೆಂಟ್‌ನ್ನು ವಾಪಸ್ ಪಡೆಯಬೇಕೆಂದು ಕೋರಿರುತ್ತಾರೆ.

9. ಕಡತವನ್ನು ಪರಿಶೀಲಿಸಿದಾಗ, ತೀರ್ಪುಧಣಿ ಪ್ರಸ್ತುತ ಜಾರಿ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 21 ನಿಯಮ 11 ರ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿ ದಾವಾ ಅನುಸೂಚಿ ಸ್ವತ್ತುಗಳನ್ನು ಸ್ವಾಧೀನಪಡಿಸಬೇಕೆಂದು ಕೋರಿರುತ್ತಾರೆ. ಜಾರಿ ಅರ್ಜಿಯನ್ನು ನೊಂದಣಿ ಮಾಡಿ ತೀರ್ಪುಋಣಿಗಳಿಗೆ ನೋಟೀಸ್‌ನ್ನು ಜಾರಿ ಮಾಡಿ ದಿನಾಂಕಃ24-6-2008 ರಂದು ಆದೇಶಿಸಲಾಗಿರುತ್ತದೆ. ತದನಂತರ , ತೀರ್ಪುಋಣಿ 2(ಎ) 3(ಎ) 3(ಬಿ) 4 ರವರಿಗೆ ಖುದ್ದು ಜಾರಿಯಾಗಿರುತ್ತದೆ. ಆದರೆ, ತೀರ್ಪುಋಣಿ 4 ರವರು ವಕೀಲರ ಮೂಲಕ ಹಾಜರಾಗಿರುತ್ತಾರೆ ಆದರೆ ಇತರರು ಹಾಜರಾಗಿರುವುದಿಲ್ಲ. ವಾರೆಂಟು ತೀರ್ಪುಋಣಿ 2(ಬಿ) ರವರು ಮೃತಪಟ್ಟಿರುತ್ತಾರೆ ಎಂದು ವಾಪಸ್ಸಾಗಿರುತ್ತದೆ. ತೀರ್ಪುಋಣಿ 2(ಸಿ) ಮತ್ತು (ಡಿ) ರವರಿಗೆ ನೀಡಿದ ನೋಟೀಸು ವಾಪಸ್ಸಾಗಿರುವುದಿಲ್ಲ. ಆ ನಂತರ ತೀರ್ಪುಧಣಿ 2(ಸಿ) ಮತ್ತು (ಡಿ) ರವರಿಗೆ ಪುನಃ ನೋಟೀಸ್‌ನ್ನು ಜಾರಿ ಮಾಡಲು ಕ್ರಮ ತೆಗೆದುಕೊಂಡಿದ್ದು ಈ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಯವರು ಜಾರಿ ಮಾಡಲು ದಿನಾಂಕಃ7-8-2008 ರಂದು ಆದೇಶಿಸಿ ಜಾರಿ ಪ್ರಕರಣವನ್ನು ಮುಂದೂಡಿರುತ್ತಾರೆ. ಆ ನಂತರವೂ ತೀರ್ಪುಋಣಿ 2(ಡಿ) ರವರು ನೋಟೀಸನ್ನು ಪಡೆದುಕೊಳ್ಳದೇ ತಿರಸ್ಕಾರ ಮಾಡಿರುತ್ತಾರೆ. ತೀರ್ಪುಋಣಿ 2(ಇ) ರವರಿಗೆ ನೀಡಿದ ನೋಟೀಸು ವಾಪಸ್ಸು ಬಾರದೇ ಇದ್ದುದರಿಂದ ಪುನಃ ನೊಂದಣಿ ಅಂಚೆ ಮೂಲಕ ಜಾರಿ ಮಾಡಲು ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಯವರು ಆದೇಶಿಸಿರುತ್ತಾರೆ. ಸದರೀ ನೋಟೀಸು ತೀರ್ಪುಋಣಿ 2 (ಸಿ) ರವರಿಗೆ ಖುದ್ದು ಜಾರಿಯಾಗಿರುತ್ತದೆ. ಆ ನಂತರವೂ ಸಹಾ ಹಾಜರಾಗಿರುವುದಿಲ್ಲ. ನಂತರ ಸೂಕ್ತ ಕ್ರಮವನ್ನು ಜರುಗಿಸಲು ಎಂದು ಜಾರಿ ಅರ್ಜಿಯನ್ನು ಮುಂದೂಡಿರುತ್ತಾರೆ. ದಿನಾಂಕಃ20-2-2010 ರಂದು ತೀರ್ಪುಧಣಿಯ ವಕೀಲರು ಕ್ರಮವನ್ನು ತೆಗೆದುಕೊಂಡಿದ್ದು ಸ್ವಾಧೀನ ಕೋರಿ ವಾರೆಂಟ್‌ನ್ನು ಜಾರಿ ಮಾಡಬೇಕೆಂದು ಕೋರಿದ್ದು ಈ ನ್ಯಾಯಾಲಯದ ಮುಖ್ಯ ಆಡಳಿತಾದಿಕಾರಿಯವರು steps not taken issue delivery warrant to jdr. ಎಂದು ದಿನಾಂಕಃ20-2-2010 ವನ್ನು

ನಿಗದಿಪಡಿಸಿರುತ್ತಾರೆ. ಆ ನಂತರ ದಿನಾಂಕ:1-3-2010 ರಂದು 4 ನೇ ತೀರ್ಪುಋಣಿ ಹಾಜರಾಗಿ ಮಧ್ಯಂತರ ಅರ್ಜಿ ಸಂಖ್ಯೆ:1 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ದಿನಾಂಕ:10-3-2010 ರಂದು ದಾವೆಯನ್ನು ಮುಂಗಡವಾಗಿ ಕರೆಸಬೇಕೆಂದು ಕೋರಿದ್ದು , ಅರ್ಜಿಯನ್ನು ಪುರಸ್ಕರಿಸಿ ಕರೆಸಲಾಗಿದ್ದು 4 ನೇ ತೀರ್ಪುಋಣಿ ಮಧ್ಯಂತರ ಅರ್ಜಿ ಸಂಖ್ಯೆ:2 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಈ ಅರ್ಜಿಯನ್ನು ಸಲ್ಲಿಸಿ ವಾರೆಂಟ್‌ನ್ನು ವಾಪಸ್ಸು ಪಡೆಯಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

10. ಜಾರಿ ಅರ್ಜಿಯನ್ನು ನೊಂದಣಿ ಮಾಡಿ ತೀರ್ಪುಋಣಿಗಳಿಗೆ ನ್ಯಾಯಾಲಯದಿಂದ ನೋಟೀಸು ಜಾರಿ ಮಾಡಲು ಆದೇಶಿದ ನಂತರ ತೀರ್ಪುಋಣಿಗಳು ತೀರ್ಪುಋಣಿ 2(ಬಿ) ರವರ ವಿರುದ್ಧ ಅವರ ವಾರಸುದಾರರನ್ನು ಪಕ್ಷಕಾರರನ್ನಾಗಿ ಸೇರ್ಪಡೆಗೊಳಿಸಲು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ, ಇತರ ತೀರ್ಪುಋಣಿಗಳಿಗೆ ನೋಟೀಸು ಜಾರಿ ಮಾಡಲು ಈ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಯವರು ಆದೇಶಿಸಿದು ಸದರೀ ಆದೇಶವು ಸಮರ್ಥಿಸುವಂಥಹ ಆದೇಶವಾಗಿರುವುದಿಲ್ಲ, ನೋಟೀಸ್‌ನ್ನು ಜಾರಿ ಮಾಡಲು ಆದೇಶಿಸಲು ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗೆ ಅಧಿಕಾರ ಇರುವುದಿಲ್ಲ, ಪಕ್ಷಕಾರರ ಯಾವುದೇ ಕ್ರಮವನ್ನು ಜರುಗಿಸುವಲ್ಲಿ ಸೂಕ್ತ ಆದೇಶಕ್ಕಾಗಿ ನ್ಯಾಯಾಲಯಕ್ಕೆ ಕಡತವನ್ನು ಕಳುಹಿಸಬೇಕಾಗಿರುತ್ತದೆ.

11. ತೀರ್ಪುಧಣಿಯು ಸದರಿ ಅರ್ಜಿಯನ್ನು ಪ್ರತಿವಾದಿ 1 ಕಾಳೇಗೌಡರ ವಿರುದ್ಧ ಸಹಾ ದಾಖಲಿಸಿರುವುದಿಲ್ಲ, ಪ್ರತಿವಾದಿ 2 ರ ವಾರಸುದಾರರು ಮತ್ತು 3 ,4 ರವರ ವಿರುದ್ಧ ಮಾತ್ರ ಸಲ್ಲಿಸಿರುತ್ತಾರೆ. ಮೂಲ ದಾವಾ ಸಂಖ್ಯೆ:377:74, ಪ್ರತಿವಾದಿ 1 ಕಾಳೇಗೌಡ , ಪ್ರತಿವಾದಿ 2 ಬಸವೇಗೌಡ, ಪ್ರತಿವಾದಿ 3 ಹಂಪೇಗೌಡ ಪ್ರತಿವಾದಿ 4 ಹಾಲೇಗೌಡ ಪ್ರತಿವಾದಿ 5 ನಿಂಗಮ್ಮ ರವರ ವಿರುದ್ದ ಆರ್.ಎಸ್.ಎ. ಸಂಖ್ಯೆ:669:1998 ರಂತೆ ಡಿಕ್ರಿಯಾಗಿರುತ್ತದೆ. ಮೂಲ ದಾವಾದಲ್ಲಿ ಇದ್ದ ಎಲ್ಲಾ ಪಕ್ಷಕಾರರ ವಿರುದ್ಧ ಪ್ರಸ್ತುತ ಜಾರಿ ಅರ್ಜಿಯನ್ನು ಏಕೆ ಸಲ್ಲಿಸಲಾಗಿಲ್ಲ ಎಂಬ ಬಗ್ಗೆ ಕಾರಣಗಳನ್ನು ತೀರ್ಪುಧಣಿಯು ನೀಡಿರುವುದಿಲ್ಲ ಮತ್ತು ಪ್ರಸ್ತುತ ಜಾರಿ ಅರ್ಜಿಯನ್ನು ಸಿವಿಲ್

ಪ್ರಕ್ರಿಯಾ ಸಂಹಿತೆ ಕ್ರಮಾದೇಶ 21 ನಿಯಮ 11 ರಡಿಯಲ್ಲಿ ನಮೂನೆಯಲ್ಲಿ ದಾಖಲಿಸಿರುತ್ತಾರೆ. 4 ನೇ ತೀರ್ಪುಧಣಿ ಈ ಅರ್ಜಿಯನ್ನು ಸಲ್ಲಿಸಿದ್ದು ಈ ಜಾರಿ ಅರ್ಜಿಯ ಅನುಸೂಚಿ ಸ್ವತ್ತಿನಲ್ಲಿ ಆರ್.ಎ.ಸಂಖ್ಯೆ:2:2001 ರ ತೀರ್ಪು ಮತ್ತು ಡಿಕ್ರಿಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ದಾವಾ ಅನುಸೂಚಿ ಸ್ವತ್ತು ಪ್ರತಿವಾದಿಯರ ವಶದಿಂದ ಸ್ವಾಧೀನಪಡಿಸಲಾಗುವುದಿಲ್ಲ ಎಂದು ತಕರಾರನ್ನು ಮಂಡಿಸಿರುತ್ತಾರೆ. ಮೇಲ್ಮನವಿ ಸಂಖ್ಯೆ:2:2011 ಪ್ರಸ್ತುತ ತೀರ್ಪು ಧಣಿಯ ವಿರುದ್ಧವಾಗಿ ದಾವಾ ಅನುಸೂಚಿ ಸರ್ವೆ ನಂ.58:4ಪಿ 0-19 ಒಟ್ಟು ವಿಸ್ತೀರ್ಣಕ್ಕೆ ಆದೇಶ ಆಗಿರುತ್ತದೆ. ತೀರ್ಪುಧಣಿಯು ಈ ತಕರಾರನ್ನು ಪರಿಗಣಿಸಬಹುದಾಗಿರುತ್ತದೆ. ತೀರ್ಪುಧಣಿಯ ತಕರಾರನ್ನು ಪರಿಗಣಿಸದೇ ಸ್ವತ್ತಿನ ಸ್ವಾಧೀನ ಕೋರಿ ವಾರೆಂಟ್‌ನ್ನು ಜಾರಿ ಮಾಡುವುದು ಸಮಂಜಸವಾಗಿರುವುದಿಲ್ಲ.

12. ಮೂಲತಃ ದಿನಾಂಕ:20-2-2010 ರಂದು ಈ ನ್ಯಾಯಾಲಯದ ಮುಂದೆ ಮುಖ್ಯ ಆಡಳಿತಾಧಿಕಾರಿ ನೀಡಿರುವ ಸ್ವಾಧೀನ ವಾರೆಂಟ್‌ನ್ನು ವಾಪಸ್ ಕರೆಸಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸ್ವಾಧೀನ ಕೋರಿ ವಾರೆಂಟ್ ಜಾರಿ ಮಾಡುವ ಮೊದಲು ತೀರ್ಪುಧಣಿಗೆ ಸ್ವಾಧೀನ ಕೋರಿ ನೋಟೀಸ್‌ನ್ನು ನೀಡಬೇಕಾಗಿರುತ್ತದೆ. ಆದರೆ, ಈ ನ್ಯಾಯಾಲಯದಿಂದ ತೀರ್ಪುಧಣಿಗೆ ನೋಟೀಸ್‌ನ್ನು ನೀಡದೇ ವಾರೆಂಟ್‌ನ್ನು ಜಾರಿ ಮಾಡುವುದು ಕಾನೂನಿನ ಅಡಿಯಲ್ಲಿ ಉರ್ಜಿತವಾಗತಕ್ಕದ್ದಲ್ಲವಾಗಿರುತ್ತದೆ. ತೀರ್ಪುಋಣಿ 2(ಬಿ) ರವರು ಮೃತಪಟ್ಟಿದ್ದಾರೆ ಎಂದು ವಾರದಿಯಾದ ನಂತರ ತೀರ್ಪುಧಣಿ ಸದರಿ ವಾರಸುದಾರರ ವಿರುದ್ಧ ಪಕ್ಷಕಾರರನ್ನಾಗಿ ಸೇರ್ಪಡೆಗೊಳಿಸಲು ಯಾವ ಇತರ ಸೂಕ್ತ ಕ್ರಮವನ್ನು ಜಾರಿಗೊಳಿಸಲು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ, ಆ ಕಾರಣದಿಂದಲೂ ಸಹಾ ವಾರೆಂಟ್‌ನ್ನು ವಾಪಸ್ಸು ಪಡೆಯುವುದು ಸಮಂಜಸವಾಗಿರುತ್ತದೆ. ನ್ಯಾಯಾಲಯದಿಂದ ವಾರೆಂಟ್‌ನ್ನು ಜಾರಿ ಮಾಡದೇ ಇರುವುದರಿಂದ ಮತ್ತು ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿ ವಾರೆಂಟು ನೀಡಿರುವುದು ಸಮರ್ಥಿಸತಕ್ಕದಲ್ಲವಾಗಿರುತ್ತದೆ. ಸದರಿ ವಾರೆಂಟ್‌ನ್ನು ವಾಪಸ್ಸು ಪಡೆಯುವುದು ನ್ಯಾಯಸಮ್ಮತವಾಗಿರುತ್ತದೆ. ಸ್ವಾಧೀನ ಕೋರಿ

ಸಲ್ಲಿಸಿರುವ ವಾರೆಂಟ್‌ನ್ನು ವಾಪಸ್ಸು ಪಡೆಯಲು ತೀರ್ಪುಋಣಿ ಸಮಂಜಸವಾದ ಕಾರಣಗಳನ್ನು ನೀಡಿರುತ್ತಾರೆ. ಆದ್ದರಿಂದ , ಅಂಶ ಸಂಖ್ಯೆ:1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

***ಅಂಶ ಸಂಖ್ಯೆ:2:-***

12. ಮೇಲ್ಕಂಡ ಅಂಶ ಸಂಖ್ಯೆ:1 ರಲ್ಲಿ ವಿವರಿಸಿದ ಕಾರಣಗಳಿಂದ ಮತ್ತು ದಾವೆಯಲ್ಲಿನ ವಸ್ತುಸ್ಥಿತ ಮತ್ತು ಸಂಗತಿಗಳ ಆಧಾರದ ಮೇಲಿನಿಂದ ಈ ಅಂಶಕ್ಕೆ ಈ ಕೆಳಕಂಡ ಅಂತಿಮ ಆದೇಶದಂತೆ ಉತ್ತರಿಸಿದ್ದೇನೆ:

**:ಆದೇಶ:**

**ತೀರ್ಪುಋಣಿ ಸಲ್ಲಿಸಿದ ಮಧ್ಯಂತರ ಅರ್ಜಿ 2 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಿದೆ.**

**ದಿನಾಂಕ:20-2-2010 ರಂದು ಆದೇಶಿಸಿರುವ ಡೆಲಿವರಿ ವಾರೆಂಟ್‌ನ್ನು ವಾಪಸ್ಸು ಪಡೆದು ಆದೇಶಿಸಿದೆ.**

**ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲ.**

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ ದಿನಾಂಕ:29 ನೇ ಸೆಪ್ಟೆಂಬರ್ 2012 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಪ್ರಕಾಶ್.ವಿ)**
**ವ್ಯವಹಾರಿಕ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ:ಬೇಲೂರು**